ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಈಗ ನಮ್ಮ ರಾಜ್ಯದಲ್ಲಿ ಅನುಸೂಚಿತಜಾತಿ ಹಾಗೂ ಅನುಸೂಚಿತ ಅದಿಮ ಜಾತಿಯವರ ಗೃಹನಿರ್ಮಾಣ ಸಹಕಾರ ಸಂಘಗಳು 211 ಇದ್ದು ಆ ಪೈಕಿ 83 ಸಹಕಾರ ಸಂಘಗಳು ಕೆಲಸ ಮಾಡುತ್ತಿಲ್ಲ. ಕೆಲಸ ಮಾಡದೆ ಇರುವ ಸಹಕಾರ ಸಂಘಗಳ ಸಂಖ್ಯೆ ಏರುತ್ತಾ ಇದೆ. ಆ ರೀತಿ ಆ ಸಹಕಾರ ಸಂಘಗಳು ಕೆಲಸ ಮಾಡದೆ ಇರುವುದಕ್ಕೆ ಮೂಲ ಕಾರಣ ಈ ಗೃಹನಿರ್ಮಾಣಕ್ಕಾಗಿ ಎಲ್. ಐ. ಸಿ, ಅವರು ಕೊಟ್ಟ 3.4 ಕೋಟಿ ರೂಪಾಯಿಗಳು ವಸೂಲು ಆಗದೇ ಇರುವುದು. ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗದವರು ತುಂಬಾ ಬಡವರು ಅವರು ಸಹಕಾರ ಸಂಘಗಳಲ್ಲಿ ತಗೆದುಕೊಂಡ ಸಾಲದ ಹಣವನ್ನು ಕಟ್ಟುವುದಕ್ಕೆ ಬಹಳ ತೊಂದರೆಯಾಗಿದೆ ಎಂದು ಸರ್ಕಾರಕ್ಕೆ ಅವರು ಮನವಿ ಮಾಡಿರುತ್ತಾರೆ. ಆದ್ದರಿಂದ ಸರ್ಕಾರದವರು ಸಾಲದ ಹಣವನ್ನು ಗ್ರಾಂಟ್ ರೂಪದಲ್ಲಿ ಪರಿವರ್ತಿಸಿ ಪ್ರತಿವರ್ಷ ಬಜೆಟ್ಟಿನಲ್ಲಿ ಒಂದು ಕೋಟಿ ರೂಪಾಯಿಗಳನ್ನು ಅದಕ್ಕಾಗಿ ಒದಗಿಸಿ ಆ ಕೆಲಸವನ್ನು ಮಾಡಿಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಇಲ್ಲಿಯವರೆಗೆ ಎಲ್. ಐ. ಸಿ. ಅವರು ಕೊಟ್ಟಂತಹ ಹಣವನ್ನು ವಾಪಸ್ಸು ಕೊಡದಿದ್ದರೆ ಅವರು ಮುಂದೆ ಹಣವನ್ನು ಕೊಡುವುದಿಲ್ಲ. ಆದ್ದರಿಂದ ಇನ್ನು ಮುಂದೆ ಈ ಗೃಹನಿರ್ಮಾಣಕ್ಕೆ ಹಣವನ್ನು ವಿತರಣೆ ಮಾಡಬೇಕಾದರೆ ಒಂದು ಪ್ರತ್ಯೇಕವಾದ ಯೋಜನೆಯನ್ನು ಹಾಕಿಕೊಳ್ಳಬಹುದೇ ಎಂಬುದನ್ನು ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ.

ಶ್ರೀ ಟಿ. ಎಂ. ಮುಂಜುನಾಥ್.—ಈಗ ಹರಿಜನ ಗಿರಿಜನರಿಗೆ ಮನೆ ಕಟ್ಟಿಕೊಳ್ಳಲು ಸರ್ಕಾರದವರು ಸಹಕಾರ ಸಂಘಗಳ ಮುಖಾಂತರ 3 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಈಗಿನ ಕಾಲದಲ್ಲಿ 3 ಸಾವಿರ ರೂಪಾಯಿಗಳಲ್ಲಿ ಮನೆಯನ್ನು ಕಟ್ಟುವುದು ಕಷ್ಟವಾಗಿದೆ. ಆದ್ದರಿಂದ ಈಗ 3 ಸಾವಿರ ರೂಪಾಯಿಗಳ ಸಾಲವನ್ನು ಕೊಡುವುವನ್ನು 5 ಸಾವಿರ ರೂಪಾಯಿಗಳಿಗೆ ಜಾಸ್ತಿ ಮಾಡುವ ಅಭಿಪ್ರಾಯ ಸರ್ಕಾರಕ್ಕೆ ಇದೆಯೇ ?

ಶ್ರೀ ಎ. ಶಂಕರ ಆಳ್ವ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

Utilisation of Loans Sanctioned to Sc/ST For House Construction

659. **Sri K. M. DORAISWAMY NAIDU** (Bethamangala).—

Will the Minister for Co-operation be pleased to state :—

(*a*) whether the Government is aware that the amounts sanctioned to the SCs. and STs. for the construction of houses are not properly utilised.

(*b*) whether there is any proposal before the Government to appoint an agency such as the Housing Board to construct those houses in the State ?

Sri A. SHANKARA ALVA (Minister Co-operation).

(*a*) In a few caset the loans sanctioned to the SC and ST members through the SC and ST Co-operative Housing Societies are reported to have not been properly utilised. However, the progress of construction of houses is generally satisfactory.

(*b*) Under consideration.

ಶ್ರೀ ಕೆ. ಎಂ. ದೊರೆಸ್ವಾಮಿನಾಯ್ಡು.—ಸ್ವಾಮಿ ನನ್ನ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಅದಿಮಜಾತಿಯವರ ಗೃಹನಿರ್ಮಾಣ ಸಹಕಾರಿ ಸಂಘದ ಮೂಲಕ ಅನುಸೂಚಿತ ಹಾಗೂ ಅನುಸೂಚಿತ ಅದಿಮ ಜಾತಿಯವರಿಗೆ ಮಂಜೂರ್ಮಾಡಲಾದ ಸಾಲಗಳನ್ನು ಕೆಲವು ಪ್ರಕರಣಗಳಲ್ಲಿ ಸರಿಯಾದ ರೀತಿಯಲ್ಲಿ ಉಪಯೋಗಿಸಿಲ್ಲ ಎಂದು ವರದಿಯಾಗಿದೆ.

(ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು)

ಮತ್ತು ಅದಾಗ್ಯೂ ಮನೆಗಳ ನಿರ್ಮಾಣ ಕಾರ್ಯದ ಪ್ರಗತಿ ಸಾಮಾನ್ಯವಾಗಿ ತೃಪ್ತಿಕರವಾಗಿದೆ ಎಂದು ಹೇಳಿದ್ದೀರಿ, ಆದರೆ ಅನೇಕ ಹಳ್ಳಿಗಳಲ್ಲಿ ಮನೆಗಳು ಅರ್ಧಂಭರ್ಧಕ್ಕೇ ನಿಂತು ಹೋಗಿ ಹಣ ಪೋಲಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಶಂಕರ ಆಳ್ವ.—ಸ್ವಲ್ಪ ಹೆಚ್ಚು ಕಡಿಮೆಯಾಗಿದೆ. 22,792 ಮನೆಗಳಿಗೆ ಹಣ ಮಂಜೂರಾಗಿದೆ. ಅದರಲ್ಲಿ ಡಿಸೆಂಬರ್ ತಿಂಗಳವರೆಗೆ 15,375 ಮನೆಗಳು ಕಂಪ್ಲೀಟಾಗಿವೆ. 7,417 ಮನೆಗಳು ಹಾಗೆಯೇ ಇವೆ. ಹಣ ದುರುಪಯೋಗವಾಗಿರುವ ವಿಷಯದಲ್ಲಿ ಈಗ ಸದ್ಯಕ್ಕೆ ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ —22,792 ಮನೆಗಳು ಮಂಜೂರಾಗಿತ್ತು, ಆ ಪೈಕಿ 7417 ಮನೆಗಳು ಇನ್ನೂ ಪೂರ್ತಿಯಾಗಿಲ್ಲ ಎಂದು ಹೇಳಿದ್ದೀರಿ ಪ್ರತಿವರ್ಷ ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಮನೆಗಳನ್ನು ಪ್ರಾರಂಭ ಮಾಡಿದರು, ಎಷ್ಟು ಮನೆಗಳನ್ನು ಪೂರ್ತಿ ಮಾಡಿದರು ಎನ್ನುತಕ್ಕಂಥಾ ಪ್ರೊಗ್ರೆಸ್ ಕೊಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಎ. ಶಂಕರ ಆಳ್ವ.—1965 ನೇ ಇಸವಿಯಿಂದ ಈ ಕಾರ್ಯಕ್ರಮ ಮುಂದುವರಿಯುತ್ತಾ ಬಂದಿದೆ

ಶ್ರೀ ಕೆ. ಆರ್. ಶ್ರೀನಿವಾಸುಲುನಾಯ್ಡು.—ಈ ಹರಿಜನಗಿರಿಜನರಿಗೆ ಮನೆಗಳನ್ನು ಕಟ್ಟಿಸಿ ಕೊಡುವ ಜವಾಬ್ದಾರಿಯನ್ನು ಸರ್ಕಾರದವರೇ ವಹಿಸಿಕೊಂಡು ಅವರಿಗೆ ಮನೆಗಳನ್ನು ಕಟ್ಟಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಶಂಕರಆಳ್ವ. —ಅದಕ್ಕೆ ಒಂದು ಪ್ರತ್ಯೇಕವಾದ ಏಜೆನ್ಸಿ ಮುಖಾಂತರ ಆ ಕಾರ್ಯಕ್ರಮವನ್ನು ಹಾಕಿಕೊಂಡು ಅವರಿಗೆ ಮನೆಗಳನ್ನು ಕಟ್ಟಿಸಿಕೊಡುವುದು ಸರ್ಕಾರದ ಗಮನದಲ್ಲಿದೆ.

ಶ್ರೀ ಕಾಗೋಡುತಿಮ್ಮಪ್ಪ.—ಇದಕ್ಕೆ ಬೇರೆ ಒಂದು ಹೌಸಿಂಗ್ ಬೋರ್ಡ್ ಮಾಡಿ ಈ ಹರಿಜನ ಗಿರಿಜನರಿಗೆ ಮನೆಗಳನ್ನು ಕಟ್ಟಿಸಿಕೊಡುವ ವಿಷಯದಲ್ಲಿ ಆಂಧ್ರ ಮತ್ತು ತಮಿಳುನಾಡಿನಲ್ಲಿ ಸರ್ಕಾರದವರು ಮನೆಗಳನ್ನು ಕಟ್ಟಿಸಿಕೊಟ್ಟು ಹಾಗೆ ಇಲ್ಲಿಯೂ ಅವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟು ಆ ಹಣವನ್ನು ಅವರಿಂದ ಕಂತುಗಳ ಮುಖಾಂತರ ಸರ್ಕಾರದವರು ವಸೂಲು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಶಂಕರಆಳ್ವ.—ಅದಕ್ಕೇ ಪ್ರತ್ಯೇಕವಾಗಿ ಒಂದು ಹೌಸಿಂಗ್ ಬೋರ್ಡ್ ಮಾಡಿದರೆ ಖರ್ಚು ಜಾಸ್ತಿಯಾಗುತ್ತದೆ. ಎಸ್ಟಾಬ್ಲಿಷ್‌ಮೆಂಟ್ ಖರ್ಚೂ ಜಾಸ್ತಿಯಾಗುತ್ತದೆ. ಆದ್ದರಿಂದ ಅದಕ್ಕೆ ಒಂದು ಪ್ರತ್ಯೇಕವಾದ ಒಂದು ಏಜೆನ್ಸಿಯನ್ನು ಮಾಡಿಕೊಂಡು ಅದರ ಮುಖಾಂತರ ಅವರಿಗೆ ಮನೆಗಳನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

Advance Increments to Teachers Holding Hindi Degree

243. Smt. NAGAMMA C. KESHAVAMURTHY (Davanagere).—

Will the Minister for Education be pleased to state :—

(*a*) the number of primary school teachers in Education Department who have passed in Hindi Degree examinations ;

(*b*) whether the degrees acquired by them are considered equivalent to other Arts, Science and Commerce Degrees ;

(*c*) whether these primary school teachers who have passed the Hindi Degree Examinations are being given four advance increments as has been done in case of other degree holders ?